R d No B ು 155 ಶ್ರೀ 24-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಪ್ರತ್ಯೇಕ ತೆಲಂಗಾಣ ಚಳುವಳಿ ಆರಂಭ

ಕನ್ನಡಿಗರಲ್ಲಿ ಒಗ್ಗಟ್ಟಿರಲಿ

ದಾವಣಗೆರೆ— ಚಿತ್ರದುರ್ಗ ಜಿಲ್ಲೆಯ ಕಾಂಗ್ರೆಸ್ ಪಾರ್ಟಿ ಕಾರ್ಯಕರ್ತರ ವಿಾಟಿಂಗಿನಲ್ಲಿ ಮಾತನಾಡುತ್ತಾ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು– 2.5 ಲಕ್ಷ ಕನ್ನಡಿಗರ ಮೇಲೆ- ಮಹಾರಾಷ್ಟ್ರ–ಮೈಸೂರು ಗಡಿ ಬಗ್ಗೆ ಕೇಂದ್ರ ಸರಕಾರದ ಯೋಜನೆ ಪ್ರಾಯೋಗಿಕವಾಗಿರುವುದೆಂದೂ ಕನ್ನಡಿಗರು ಗಡಿ ವಿಚಾರದಲ್ಲಿ ಒಗ್ಗಟ್ಟಾಗಿರಬೇಕೆಂದೂ ಹೇಳಿದರು.

○

ಶಿವಪ್ಪನವರಿಗೆ ಮಾನ್ಯತೆ

ನಲವತ್ತಮೂರು ಮಂದಿ ಸದಸ್ಯರು ಇರುವ ಎಸ್ ವಿ ಡಿ ಯನ್ನು ಪ್ರಮುಖ ವಿರೋಧಿ ಗುಂಪಾಗಿ ಸ್ಪೀಕರ್‌ರವರು ಮನ್ನಣೆ ಕೊಟ್ಟಿರುವುದಾಗಿ ಬೆಂಗಳೂರು ವಾರ್ತೆ ಶ್ರೀ ಶಿವಪ್ಪನವರು ವಿರೋಧಿ ಪಕ್ಷದ ನಾಯಕರಾದರು.

★

ಭಕ್ತರ ನಿಧನ

ಮಥುರಾ— ಕೆಸಿಪುರಿಯಾದಲ್ಲಿ ವಿಶಾಕ ನಾಗರೀಯಾ ದೇವಾಲಯದಲ್ಲಿ ಪ್ರಾರ್ಥನೆ ಮಾಡುತ್ತಿದ್ದ ಭಕ್ತರ ಮೇಲೆ, ಆಲ್ಲಿ ಕಟ್ಟಲಾಗುತ್ತಿದ್ದ ದೇವಾಲಯದ ಚಾವಣಿ ಕುಸಿದ ಭಕ್ತರ ಮೇಲೆ ಬಿದ್ದಿತು – ಇಬ್ಬರು ಸತ್ತು ೭೨ ಮಂದಿ ಗಾಯಗೊಂಡರು.

●

ಕನ್ನಡದಲ್ಲಿ ಭಾಷಣ

ಬೆಂಗಳೂರು— ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ನಿನ್ನೆ ಬಡ್ಜೆಟ್ ಭಾಷಣವನ್ನು 90 ನಿಮಿಷ ಕನ್ನಡದಲ್ಲಿ ಮಾಡಿದರು

★

ಮೂರನೇ ಒಂದು ಭಾಗ

ಪ್ರಧಾನಿಯವರ ಯೋಜನೆಯಂತೆ ಪಿಳಗಾನಿನ ನೂರನೇ ಒಂದು ಭಾಗ ಮತ್ತು 9 ಪಕ್ಕದ ಗ್ರಾಮಗಳು ಒಟ್ಟು 83ಸಾವಿರ ಜನಸಂಖ್ಯೆಯು ಮೈಸೂರಿನಿಂದ ಮಹಾರಾಷ್ಟ್ರಕ್ಕೆ ಹೋಗುವುದಾಗಿದೆ ಎಂದು ಹೇಳಲಾಗಿದೆ. ಈ ಯೋಜನೆಯಂತೆ ಹಳಿಯಾಳ ತಾಲ್ಲೂಕಿನ 99 ಗ್ರಾಮಗಳು ಬಿದರಿ ಜಿಲ್ಲೆಯ 108 ಗ್ರಾಮಗಳು, ಖಾನಾಪುರದ ಹದಿನಾಲ್ಕು ಗ್ರಾಮಗಳು ಮಹಾರಾಷ್ಟ್ರಕ್ಕೆ ವರ್ಗಾವಣೆ ಆಗಬೇಕಾಗುತ್ತದೆ.

○

ತೆಲಂಗಾಣಾ ಚಳವಳಿ

ಹೈದರಾಬಾದು— ಪ್ರತ್ಯೇಕ ತೆಲಂಗಾಣಾ ಚಳವಳಿದ ಎರಡನೇ ತೋರಿಕೆಯಲ್ಲಿ ನಿನ್ನೇ ಕೆಲವು ಅಗ್ನಿಸ್ಪರ್ಶಗಳೂ, ಕಲ್ಲೆಸತವೂ, ಸರಕಾರಿ ಆಫೀಸುಗಳೂ ಮತ್ತು ರೈಲ್ವೇ ಸ್ಟೇಷನ್‌ಗಳ ಮೇಲೆ ಧಾಳಿ, ಪೋಲೀಸರ ಮೇಲೆ ಸಿಕ್ಕಿದ್ದೆಸೆಯುವುದೂ ನಡೆಯಿತು – ಪ್ರತಿಬಂಧಕಾಜ್ಞೆ ಉಲ್ಲಂಘಿಸಿದ ಮುನಿಸಿಪಲ್ ಮೇಯರ್ ಮತ್ತಿತರ 15 ಮಂದಿ ಬಂಧಿಸಲ್ಪಟ್ಟರು – ಇಂದು ಬಂದ್‌ಗೆ ಕರೆ ಕೊಡಲಾಗಿದೆ.

○

ಲಿಖಿತ ಸೂಚನೆ ಬರಬೇಕು

ಬೆಂಗಳೂರು— ಗಡಿ ವ್ಯಾಜ್ಯ ಸಂಬಂಧದಲ್ಲಿ ಪ್ರಧಾನಿಯವರು ತಾವೇ ಖುದ್ದಾಗಿ ಕೇಂದ್ರ ಗೃಹ ಸಚಿವಾಲಯ ಮೂಲಕವಾಗಲಿ ಗಡಿ ಸಂಬಂಧದ ಇವರ ಸೂಚನೆಯನ್ನು ಲಿಖಿತಾನುಮತಿಕ ತಿಳಿಸಿದರೆ ತಾವು ದೆಹಲಿಗೆ ಚರ್ಚಿಸಲು ಹೋಗುವುದಾಗಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ದರಗಳ ಏರಿಕೆ

ಪಾರ್ಲಿಮೆಂಟಿನಲ್ಲಿ ನಿನ್ನೆ ಮಂಡಿಸಲಾದ ರೈಲ್ವೆ ಆದಾಜುಪಟ್ಟಿಯಲ್ಲಿ ಪ್ರಯಾಣಿಕರ ಮತ್ತು ಸಾಮಾನು ಸಾಗಾಣಿಕೆ ದರ ಏರಿಕೆಯನ್ನು ಸೂಚಿಸಲಾಗಿದೆ. ಪ್ಲಾಟ್‌ಫಾರಂ ಟಿಕೆಟ್ ದರ 25 ಪೈಸೆಗೆ ಹೆಚ್ಚಿಸುವ ಸೂಚನೆ ಆಗಿದೆ. ಈ ಏರಿಕೆಯನ್ನು ಪಾರ್ಲಿಮೆಂಟ್‌ನ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟಿಸಿರುವರು.

★

ಬಡ್ಜೆಟ್

ಬೆಂಗಳೂರು— ರಾಜ್ಯದ 70–71 ರ ಬಡ್ಜೆಟ್ ನಿನ್ನೆ ಶಾಸನಸಭೆಗಳಲ್ಲಿ ಮಂಡಿಸಲಾಯಿತು – ರೆವಿನ್ಯೂ ರೂ. 15.48 ಜೋತಾ ಆಗಿದ್ದು, ಒಟ್ಟು ಬಡ್ಜೆಟ್‌ನಲ್ಲಿ ರೂ 11.16 ಕೋಟಿ ಜೋತಾ ಇದೆ – ಕಾರ್ಪೋರೇಷನ್ ಮತ್ತು ಮುನಿಸಿಪಲ್ ಭಾಗಗಳಲ್ಲಿ ಆಸ್ತಿ ತೆರಿಗೆ ಮತ್ತು ವಿವಿಧ ಕರಗತಿಯ ವಿದ್ಯುಚ್ಛಕ್ತಿ ತೆರಿಗೆ ಹೆಚ್ಚಿಸಲಾಗುವುದು.

★

ಹರತಾಳ

ಕೊಲ್ಲಾಪುರ— ಕಳೆದವಾರ ಬೆಳಗಾಂನಲ್ಲಿ ನುರಾಟೆ ಮಾತನಾಡುವವರ ಮೇಲೆ ಮೇಲೆ ನಡೆದ ಲಾಠಿ ಚಾರ್ಜನ್ನು ಪ್ರತಿಭಟಿಸಿ ನಿನ್ನೆ ಹರತಾಳ ನಡೆಯಿತು.

○

ರೈಲ್ವೇ ಆದಾಯ

ನವದೆಹಲಿ— ರೈಲ್ವೇ ಬಡ್ಜೆಟ್‌ನಲ್ಲಿ ರೂ 22 ಕೋಟಿ ಉಳಿತಾಯವಿದೆ.

★

ಬೆಂಗಳೂರು— ಗಡಿ ಸಮಸ್ಯೆ ಬಗ್ಗೆ ಎಲ್ಲ ವಿರೋಧ ಪಕ್ಷಗಳೂ ವೀರೇಂದ್ರ ಪಾಟೀಲರ ಸರಕಾರಕ್ಕೆ ಬೆಂಬಲ ನೀಡುವವು.

ಅಬ್ದುಲ್ಲರ ಆಶಯ

ನವದೆಹಲಿ— ಪಾಕಿಸ್ತಾನ ಆಕ್ರಮಿತ ಆಜಾದ್ ಕಾಶ್ಮೀರದಲ್ಲಿರುವ 125 ಕಾಶ್ಮೀರಿಗಳನ್ನು, ಮೇ ತಿಂಗಳಲ್ಲಿ ಶ್ರೀನಗರದಲ್ಲಿ ನಡೆಸಲು ಶೇಕ್ ಅಬ್ದುಲ್ಲರು ಯೋಜಿಸಿರುವ ಜಮ್ಮು–ಕಾಶ್ಮೀರ ರಾಜ್ಯದ ಜನತಾ ಸಮ್ಮೇಳನದ 2 ನೇ ಅಧಿವೇಶನಕೆ ಬರಲು ಅನಕಾಶ ಕೊಡುವಂತೆ ಭಾರತ ಮತ್ತು ಪಾಕಿಸ್ತಾನಗಳಿಗೆ ಸಲಹೆ ಮಾಡಿ, ಪ್ರಧಾನಿ ಇಂದಿರಾ ಮತ್ತು ಅಧ್ಯಕ್ಷ ಯಹ್ಯಾ ಖಾನರಿಗೆ ಫೆಬ್ರವರಿ 3 ರಂದು ಒಂದೇ ರೀತಿ ಕಾಗದ ಬರೆದುದಾಗಿ ಶೇಕ್ ಅಬ್ದುಲ್ಲಾರವರು ಹೇಳಿದರು.

★

ರೈಲ್ವೇ ಆಕಸ್ಮಿಕಗಳು

ನವದೆಹಲಿ— 66–67 ರಲ್ಲಿ ರೈಲ್ವೇ ಆಕಸ್ಮಿಕಗಳು 5889 ಇದ್ದದ್ದು, 67 68 ರಲ್ಲಿ 5502 ಕ್ಕೂ, 68–69 ರಲ್ಲಿ 5033 ಕ್ಕೂ ಇಳಿದಿದೆ.

○

ಪ್ರತಿಭಟನಾ ಮೆರವಣಿಗೆ ಮತ್ತು ಭಾವಚಿತ್ರ ದಹನ

ಹುಬ್ಬಳ್ಳಿ— ಮಹಾರ್ಜ ಕಮಿರ್ಷ ವರದಿ ಬಿಟ್ಟು, ಮೈಸೂರು – ಮಹಾರಾಷ್ಟ್ರ ಗಡಿ ಸಮಸ್ಯೆ ಪರಿಹರಿಸಲು ಪ್ರಧಾನಿ ಇಂದಿರಾರವರ ಯೋಜನೆಯನ್ನು ಪ್ರತಿಭಟಿಸಿ 3500 ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು - ಮಾರ್ಗದಲ್ಲಿ ದುರ್ಗಾಬೈಲಿನಲ್ಲಿ ಒಂದು ಸ್ಟೂಡಿಯೋದಲ್ಲಿದ್ದ ಇಂದಿರಾರವರ ದೊಡ್ಡ ಭಾವಚಿತ್ರ ತೆಗೆಸಲು ಸ್ಟೂಡಿಯೋ ಮೇಲೆ ಕಲ್ಲು ಬೀರಿದರು - ಕಡೆಯಲ್ಲಿ ಪ್ರಧಾನಿ ಇಂದಿರಾ ಮತ್ತು ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್‌ರವರ ಭಾವಚಿತ್ರಗಳನ್ನು ಸುಟ್ಟರು.

"Bank Road Bahusar – A Fair Price Shop in Actual Practice"

ಅತ್ಯಂತ ಪುರಾತನ ಗಡಿಯಾರ ಸಂಗ್ರಹ

ಫೆಡರಾಲ್ ರಿಪಬ್ಲಿಕ್ ಜರ್ಮನಿಯ ಉಪ್ಪರ್‌ಟಾಲ್‌ನಲ್ಲಿರುವ ಗಡಿಯಾರ ಗೋಪುರಣಿಯ ಸ್ಥಾನವು ಅತ್ಯಂತ ರಮ್ಯವಾಗಿದೆ. ಪ್ರಪಂಚದಲ್ಲೇ ಅತ್ಯಂತ ಪುರಾತನವಾದ ಗಡಿಯಾರಗಳು ಇಲ್ಲಿವೆ. ಅಪುಸೋಫಿಸಿ 111 ರ ಕಾಲದ (1411 1375 ಕ್ರಿ ಪೂ) ಈಜಿಪ್ಟಿನ ಜಲಗಡಿಯಾರವೂ ಸಹ ಇಲ್ಲಿವೆ. ಮರೆಯಾಗಿರುವ ನಕ್ಷತ್ರ ಗಡಿಯಾರವು, ಅಸೋಟಿಸಿಶೀಜಸ್ ಕಾಲದಲ್ಲಿ ಅಂದರೆ 1754 ಕ್ರಿ ಸುಮಾರಿಗೆ ಸೇರಿದ್ದಾಗಿದೆ ಈ ಗಡಿಯಾರವು ಹಗಲು ರಾತ್ರಿಯ ಕಾಲವನ್ನು, ಗ್ರಹಣಗಳನ್ನು, ವಿವಿಧ ವರ್ಣಗಳಲ್ಲಿಯೂ ಕೂಡಿ, ಸಮಿಷದ ನುಳ್ಳು, ಸ್ವಚಾಲಕ ವಂದನ್ನು ತೋರಿಸುವ ಸಾಧನವೂ ಅಲ್ಲದೆ ಗಡಿಯಾರದ ಮುಖವು ಸೂರ್ಯನ ದಿಕ್ಕಿಗೆ ತಕ್ಕ ಹಾಗೆಯೂ ಇರುವುದು ಇದರ ಅತ್ಯಂತ ಆಶ್ಚರ್ಯಕರವಾದ ರಚನಾ ಚಾತುರ್ಯವಾಗಿದೆ. (ಡಾಡ್ – ಯೂ ಪಿ ಎಸ್)

ಜನಸಂಖ್ಯೆ ಸಮಸ್ಯೆ

ವಿಶ್ವಸಂಸ್ಥೆ — 1970 ರಿಂದ 1980 ರ ಮಧ್ಯೆ ವಿಶ್ವದ ಪಟ್ಟಣಗಳ ಜನಸಂಖ್ಯೆಯ 990 ಮಿಲಿಯನಿಂದ 1780 ಮಿಲಿಯ ಆಗುವ ನಿರೀಕ್ಷೆ ಇದೆಯೆಂದು ವಿಶ್ವಸಂಸ್ಥೆಯ ಜನಸಂಖ್ಯೆ ಕಮಿಷನ್ ಅಭಿಪ್ರಾಯಪಟ್ಟಿದೆ.

ಕನ್ನಡ ಸೇನೆ

ಬೆಂಗಳೂರು— ರಾಜ್ಯದ ಗಡಿ ರಕ್ಷಣೆಗೆ ಕನ್ನಡ ಸೇನೆ ಸ್ಥಾಪಿಸಲ್ಪಡುವ ವಿಷಯ ಪ್ರಕಟವಾಗಿದೆ. 10 ಲಕ್ಷ ಸದಸ್ಯರನ್ನು ಸದಸ್ಯರನ್ನು ನೇರಿಸಲು ಸಂಘಾಲಕರು ಯೋಜಿಸಿದ್ದಾರೆ.

ಆಪೆರಾ— ಅಮೋಘ 3 ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶಿ ಲ

ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ

ದಿನ 3 ಆಟಗಳು

ದೇಶದ ಹಿತಕ್ಕಾಗಿ

ಕುಟುಂಬ ಯೋಜನೆ

Quality Printing — Neat Binding

Lakshminarasimha Press

Sivarampet, Mysore

Help The Gorakshana

ಅಖಿಲ ಭಾರತದಲ್ಲಿ ಗೋವಧೆ ನಿಷೇಧವಾಗಲಿ

Edited, Printed & Published by Dharmaprachara Niraka
M S Krishna Rao (Proprietor) at the Satyavadi Press
Chamarajapura, Mysore 2

ಪುಟ್ಟಣ್ಣ ಅಮೋಘ 8 ನೇ ವಾರ

ಶಿ ನ ಅಮೋಘ ಪ್ರಾರಂಭ

ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ಜ

ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಛೇರಿ, ಕಟ್ಟಡಗಳ ವಿಭಾಗ, ಮೈಸೂರು - 1

ಸಂಕಿಪ್ತ ಟೆಂಡರ್ ಪ್ರಕಟಣೆ

ತಾ || ಎಕ್ಸ್. 37 / 7-2-70

ಈ ಕೆಳಗೆ ಕಂಡ ಕೆಲಸಗಳಿಗಾಗಿ ಮೈಸೂರು ಪಿ. ಡಬ್ಲ್ಯು. ಡಿ. ಯಿಂದ ಅಂಗೀಕೃತವಾಗಿರುವ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ವಿಧಾಯಕವಾದ ಫಾರಂನಲ್ಲಿ ಕೆಲಸದ ಹೆಸರು ಬೆರೆಡಿರುವ ಸೀಲಾದ ಕೊಟೇಷನ್‌ಗಳನ್ನು ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ ಮತ್ತು ಮೈಸೂರು- 1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಅವರ ಕಛೇರಿಯಲ್ಲಿ 25–2–1970 ನೇ ಮಧ್ಯಾಹ್ನ 4 ಘಂಟೆವರೆಗೆ ಅದನ್ನು ಸ್ವೀಕರಿಸಲಾಗುವುದು. ಸ್ವೀಕರಿಸಿದ ಟೆಂಡರುಗಳನ್ನು ಸಾಧ್ಯವಾದರೆ ಅದೇ ದಿನ ಒಡೆಯಲಾಗುವುದು. ಮೈಸೂರು – 1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ 20–2–70 ರಿಂದ 24–2–70 ರವರೆಗೆ (ಎರಡು ದಿನಗಳೂ ಸೇರಿ) ಕೆಲಸದ ಎಲ್ಲಾ ದಿನಗಳಲ್ಲೂ, ಕಛೇರಿಯ ಕೆಲಸದ ವೇಳೆಗಳಲ್ಲಿ ಫಾರಂ ಒಂದಕ್ಕೆ ರೂ. 5/– ಪಡೆದು ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಮೈಸೂರು – 1 ರಲ್ಲಿರುವ, ಕಟ್ಟಡಗಳ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಕೆಲಸಗಳ ಮತ್ತಷ್ಟು ವಿವರಗಳನ್ನು ಮತ್ತು ಟೆಂಡರ್ ಷರತ್ತುಗಳನ್ನು ಪಡೆಯಬಹುದು.

ಟೆಂಡರ್‌ನ್ನು ಅಂಗೀಕರಿಸಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ಕೊಡದೆ ನಿರಾಕರಿಸುವ ಹಕ್ಕು ಕಾದಿರಿಸಲ್ಪಟ್ಟಿದೆ.

ಸೀ. ನಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ಇಎಂಡಿ	ಕೆಲಸಗಳನ್ನು ಮುಗಿಸಲು ಕಾಲಾವಧಿ	ಕಂಟ್ರಾಕ್ಟರ್ ವರ್ಗ
1.	ಮೈಸೂರು ಮಹಾರಾಜರವರ ಹೈಸ್ಕೂಲ್‌ನಲ್ಲಿ ಮೊದಲೇ ಅಂತಸ್ತಿನಲ್ಲಿ ಹೆಚ್ಚಿನ ತರಗತಿಕೋಣೆಗಳ ನಿರ್ಮಾಣದ ಉಳಿಕೆ ಕೆಲಸ	33700	850	5 ತಿಂಗಳು	3 ಮತ್ತು ಮೇಲ್ಪಟ್ಟ
2.	ಮೈಸೂರಿನಲ್ಲಿನ ಹಾಲು ಸರಬರಾಜು ಯೋಜನೆಯಲ್ಲಿ ಹಾಲು ಸಂಸ್ಕರಣ ಯಂತ್ರ ಸಾಮಗ್ರಿಗಳ ಕಟ್ಟಡಕ್ಕೆ ನೀರು ಸರಬರಾಜು ಮತ್ತು ಸ್ಯಾನಿಟರಿ ಸಂಪರ್ಕವನ್ನು ಒದಗಿಸುವುದು	10600	265	2 ತಿಂಗಳು	4 ಮತ್ತು ಮೇಲ್ಪಟ್ಟ
3.	ಮೈಸೂರುನಲ್ಲಿನ ಹಾಲು ಸರಬರಾಜು ಯೋಜನೆಯಲ್ಲಿ ಹಾಲು ಸಂಸ್ಕರಣ ಯಂತ್ರ ಸಾಮಗ್ರಿಗಳ ಕಟ್ಟಡಕ್ಕೆ ರೋಲಿಂಗ್ ಷಟರ್ಸ್ ಒದಗಿಸುವುದು ಮತ್ತು ಫಿಕ್ಸ್ ಮಾಡುವುದು	6000	150	2 ತಿಂಗಳು	ಡಿಟೋ

ಸಹಿ/– ವೈ. ಶಿವಪ್ಪ,
ಎಕ್ಸಿಕ್ಯುಟೀವ್ ಇಂಜಿನಿಯರ್, ಕಟ್ಟಡಗಳ ವಿಭಾಗ.